# ಗದಗ ಬೆಟಗೇರಿ ನಗರಸಭೆ ಕಾರ್ಯಾಲಯ

ನಂ.ಗಬೆನಸ/ಆವಿ/ಘವನಿ/ವಾಹನಚಾಲಕ/09-10 ದಿನಾಂಕ: 25-09-2009

**ಟೆಂಡರ ಪ್ರಕಟಣೆ**

ಗದಗ ಬೆಟಗೇರಿ ನಗರಸಭೆಯ ಹದ್ದಿನಲ್ಲಿಯ ಘನತ್ಯಾಜ್ಯ ವಸ್ತು ನಿರ್ವಹಣಾ ಮತ್ತು ವಿಲೇವಾರಿ ವಾಹನಗಳಿಗೆ ಚಾಲಕರನ್ನು/ ಹೆಲ್ಪರ್ಸನ್ನು ಪೂರೈಸಲು ಅರ್ಹ ಗುತ್ತಿಗೆದಾರರು, ಸೇವಾ ಒದಗಿಸುವರು ಅಥವಾ ನೋಂದಾಯಿತ ಸಂಸ್ಥೆಗಳವರಿಂದ ಟೆಂಡರ್ ಕರೆಯಲಾಗಿದೆ.

ಖಾಲಿ ಟೆಂಡರ್ ಫಾರಂಗಳಿಗಾಗಿ ಟೆಂಡರ್ ಫಾರಂ ಶುಲ್ಕ ರೂ 500+ತೆರಿಗೆ ಪಾವತಿಸಿದ ರಶೀದಿಯೊಂದಿಗೆ ಅರ್ಜಿ ಸಲ್ಲಿಸುವ ಕೂನೆಯ ದಿನಾಂಕ 8-10-2009 ಸಂಜೆ 5-30 ರವರೆಗೆ. ಖಾಲಿ ಟೆಂಡರ್ ಫಾರಂಗಳನ್ನು ನೀಡುವ ದಿನಾಂಕ: 9-10-2009 ಸಂಜೆ 5.30 ರವರೆಗೆ ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ನಗರಸಭೆಯ ಆರೋಗ್ಯ ವಿಭಾಗದಲ್ಲಿ ಇಟ್ಟ ಟೆಂಡರ್ ಬಾಕ್ಸನಲ್ಲಿ ಹಾಕುವ ಕೊನೆಯ ದಿನಾಂಕ: 12-10-2009 ಸಂಜೆ 5.00 ರವರೆಗೆ. ಹೆಚ್ಚಿನ ಮಾಹಿತಿ ಹಾಗು ಇತರೆ ಷರತ್ತುಗಳ ಬಗ್ಗೆ ಕಛೇರಿ ವೇಳೆಯಲ್ಲಿ ಪರಿಸರ ಅಭಿಯಂತರರಿಂದ ಕೇಳಿ ಪಡೆದುಕೊಳ್ಳಬಹುದು. ಅಥವಾ ನಗರಸಭೆಯ ಅಂತರ್ಜಾಲ www.gadag-betagericity.gov.in ನಲ್ಲಿಯೂ ಪಡೆಯಬಹುದು.

| | |
|---|---|
| (ಶ್ರೀಮತಿ ಜಯಶ್ರೀ ಸಿ. ಉಗಲಾಟದ) | (ಶ್ರೀ ಎಸ್. ಎಸ್.ನಾಗರಾಣ) |
| ಅಧ್ಯಕ್ಷರು | ಪೌರಾಯುಕ್ತರು, |
| ಗದಗ-ಬೆಟಗೇರಿ ನಗರಸಭೆ | ಗದಗ-ಬೆಟಗೇರಿ ನಗರಸಭೆ |

ನಿಬಂದನೆಗಳು:

1. ಈ ಅವಧಿಯು ಕಾರ್ಯಾದೇಶ ನೀಡಿದ ದಿನಾಂಕದಿಂದ ಒಂದು ವರ್ಷದವರೆಗೆ ಇದ್ದು ಟೆಂಡರುದಾರ ಕೆಲಸವನ್ನು ಪರಿಗಣಿಸಿ ತೃಪ್ತಿಕರವೇನಿಸಿದಲ್ಲಿ ಮತ್ತೊಂದು ವರ್ಷಕ್ಕೆ ಮುಂದುವರಿಸ ಬಹುದಾಗಿದೆ
2. ಗುತ್ತಿಗೆದಾರರು ಕರ್ನಾಟಕ ಕಾರ್ಮಿಕ ಇಲಾಖೆಯಿಂದ ಗುತ್ತಿಗೆ ಪರವಾನಗಿ ಹೊಂದಿರತಕ್ಕದ್ದು.
3. ಟೆಂಡರುದಾರರು 50,000/- ರೂಗಳ ಇ.ಎಂ.ಡಿ ಹಣವನ್ನು ಪಾವತಿಸಿದ ರಶೀಧಿ ಪ್ರತಿ ಅಥವಾ ಪೌರಾಯುಕ್ತರು, ಗದಗ-ಬೆಟಗೇರಿ ನಗರಸಭೆ ಇವರ ಹೆಸರಿನಲ್ಲಿ ಪಡೆದ ಬ್ಯಾಂಕ್ ಡಿ.ಡಿ.ಯನ್ನು ಲಗತ್ತಿಸಿರತಕ್ಕದ್ದು.
4. ಕಾಲ ಕಾಲಕ್ಕೆ ಸರ್ಕಾರ ನಿಗದಿಪಡಿಸಿ ಹೊರಡಿಸುವ ಅಧಿಸೂಚನೆಯಂತೆ ಕನಿಷ್ಠ ವೇತನ ದರಗಳನ್ನು ನೇಮಕಾತಿ ಹೊಂದುವ ಸಿಬ್ಬಂದಿಗಳಿಗೆ ನೀಡುವುದಕ್ಕೆ ಬದ್ದರಾಗಿರತಕ್ಕದ್ದು.
5. ಟೆಂಡರುದಾರರು ಒದಗಿಸುವ ವಾಹನ ಚಾಲಕರು ಸೂಕ್ತ ಪರವಾನಿಗೆ, ಅನುಭವಸ್ಥರಾಗಿದ್ದು, ಕ್ಷಮತೆ ಹಾಗೂ ಉತ್ತಮ ಗುಣ ನಡತೆ ಮತ್ತು ಚಾಲನೆಯಲ್ಲಿ ಒಂದು ವರ್ಷದ ಅನುಭವ ಹೊಂದಿರ ತಕ್ಕದ್ದು.
6. ಯಾವುದೇ ಟೆಂಡರನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ನಗರಸಭೆ ಹೊಂದಿರುತ್ತದೆ.
7. ಗೈರು ಹಾಜರಾದ ದಿನಗಳ ದಿನಗೂಲಿಯನ್ನು ಪಾವತಿಸುವುದಿಲ್ಲ. ಯಾವುದೇ ಸಂದರ್ಭಗಳಲ್ಲಿ ಮುಂಗಡ ಹಣ ನೀಡಲಾಗುದಿಲ್ಲ.
8. ನಗರಸಭೆ ನೀಡುವ ಟೆಂಡರ ಪಾರ್ಮನಲ್ಲಿ ನಮೂದಿಸಿರುವ ಇತರೆ ಶರತ್ತುಗಳಿಗೆ ಬದ್ಧರಾಗಿರತಕ್ಕದ್ದು.
9. ಹೆಚ್ಚಿನ ಮಾಹಿತಿಯನ್ನು ಕಛೇರಿ ವೇಳೆಯಲ್ಲಿ ಸಂಬಂದ ಪಟ್ಟವರಿಂದ ಕೇಳಿ ಪಡೆದುಕೊಳ್ಳಬಹುದು.

ಪೌರಾಯುಕ್ತರು,
ಗದಗ-ಬೆಟಗೇರಿ ನಗರಸಭೆ